ಆ) ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಡಿಯಲ್ಲಿ ತೊಂದರೆಗೊಳಗಾದ ಸವಳು ಮತ್ತು ಜವಳು ಭೂಮಿಯ ಸುಧಾರಣೆಯನ್ನು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಇವರು ಕೈಗೆತ್ತಿ ಕೊಂಡಿರುತ್ತಾರೆ. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರವು ವ್ಯಾಪ್ಕೋಸ್, ನವದೆಹಲಿ ಇವರೊಂದಿಗೆ ಮಲ್ಲಪ್ರಭಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಭೂಮಿಯನ್ನು ಕೃಷಿ ಯೋಗ್ಯ ಮಾಡುವ ಸಲುವಾಗಿ ಯೋಜನೆ ರೂಪಿಸಲು ಒಪ್ಪಂದ ಮಾಡಿಕೊಂಡಿರುತ್ತಾನೆ. ವ್ಯಾಪ್ಕೋಸ್ ಇವರ ಅಂತಿಮ ಮಾಡಿಕೊಂಡಿರುತ್ತಾರೆ. ವ್ಯಾಪ್ಕೋಸ್ ಇವರ ಅಂತಿಮ ವರದಿಯು ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರಿಂದ ಸ್ವೀಕೃತಗೊಂಡಿದ್ದು ಅಂತಿಮ ರೂಪರೇಷೆಯಲ್ಲಿದ್ದು ಕಾಮಗಾರಿಗಳನ್ನು ಇಷ್ಟರಲ್ಲೇ ಕೈಗೆತ್ತಿಕೊಳ್ಳಲಾಗುವುದು.

ಇ) 1988-989ರ ನಂತರ ಕಾಡಾ ದಡಿಯಲ್ಲಿ ಸವಳು ಮತ್ತು ಜವಳು ಇದರಿಂದ ತೊಂದರೆಗೊಳಗಾದ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಲು ಅನುದಾನವನ್ನು ಅತ್ಯಲ್ಪ ಅನುದಾನವನ್ನು ಕಾದಾದಡಿಯಲ್ಲಿ ಒದಗಿಸಲಾಗಿದೆ. ಆದ್ದರಿಂದ ಸದರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಈ ತರಹದ ಕೆಲಸಗಳನ್ನು ಪ್ರಸ್ತುತ ವಿಶ್ವ ಆಹಾರ ಕಾರ್ಯಕ್ರಮದ ಅನುದಾನಡಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಬೀಳಗಿಯ ನೀರಾವರಿ ಕೆರೆಗಳ ಬಗ್ಗೆ

220 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಬೀಳಗಿ ಮತ ಕ್ಷೇತ್ರದ ಖಾಚೀ ಬೀಳಗಿ ನೀರಾವರಿ ಕೆರೆ ಒಡೆದು ಎಷ್ಟು ವರ್ಷಗಳಾಗಿವೆ.

ಆ) ಈ ಕೆರೆಯಿಂದ ಒಟ್ಟು ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುತ್ತಿತ್ತು;

ಇ) ಈ ಕೆರೆಯನ್ನು ಕಟ್ಟಲು ಸರ್ಕಾರ ಯೋಜನೆಯೇನಾದರೂ ರೂಪಿಸಿದೆಯೇ,

ಈ) ಹಾಗಿದ್ದಲ್ಲಿ, ಯೋಜನೆಯ ಅಂದಾಜು ವೆಚ್ಚ ಎಷ್ಟು;

ಉ) ಪ್ರಸಕ್ತ ಸಾಲಿನಲ್ಲಿ ಯೋಜನೆಯನ್ನು ಮುಕ್ತಾಯಗೊಳಿಸಲು ಸರ್ಕಾರ ಏನು ಕ್ರಮಕೈಗೊಳ್ಳಲಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸುಮಾರು 5 ವರ್ಷಗಳಾಗಿವೆ.

ಆ) ಒಟ್ಟು 276 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುತ್ತಿತ್ತು.

ಇ) ರೂಪಿಸಿದೆ.

ಈ) 28.50 ಲಕ್ಷ ರೂ.ಗಳು

ಉ) ಈ ಯೋಜನೆಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಅಬ್ಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ

222 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯ ಸರ್ಕಾರಕ್ಕೆ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿಯ ಮೊತ್ತವೆಷ್ಟು? (ಬಾಕಿ ಕೊಡಬೇಕಾಗಿರುವ ಸಂಸ್ಥೆಗಳ ಹೆಸರು ಹಾಗೂ ಅವರಿಂದ ಬರಬೇಕಾದ ಬಾಕಿಯ ಮೊತ್ತದ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು)*

2) *ಎಷ್ಟು ಅವಧಿಯಿಂದ ಈ ಬಾಕಿಯು ವಸೂಲಾಗಿಲ್ಲ?*

3) *ಇದಕ್ಕೆ ಕಾರಣಗಳೇನು?*

4) *ಬಾಕಿಯನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?*

ಶ್ರೀ ತಿಪ್ಪೆಸ್ವಾಮಿ (ಅಬಕಾರಿ ಸಚಿವರು) :

1) 1993-94ನೇ ಸಾಲಿನ ಅಬಕಾರಿ ವರ್ಷದವರೆಗೆ ವಸೂಲಿಯಾಗಬೇಕಾಗಿರುವ ಅಬಕಾರಿ ಬಾಕಿ ಮೊತ್ತ ರೂ. 212.13 ಕೋಟಿ ಆಗಿರುತ್ತದೆ. (ಬಾಕಿದಾರರ ಪಟ್ಟಿಯನ್ನು ಇದೇ ದಿನ ಉತ್ತರಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 23ಕ್ಕೆ ಈಗಾಗಲೇ ಲಗತ್ತಿಸಿದ್ದು ಅದೇ ಪಟ್ಟಿಯು ಈ ಪ್ರಶ್ನೆಗೂ ಅನ್ವಯವಾಗುತ್ತದೆ).

2) 1945-46ನೇ ವರ್ಷದಿಂದ ಬಾಕಿ ಉಳಿದಿರುತ್ತದೆ.

3) ವಿಳಂಬಕ್ಕೆ ಕಾರಣಗಳೇನೆಂದರೆ, ಹಲವಾರು ಪ್ರಕರಣಗಳಲ್ಲಿ ನ್ಯಾಯಾಲಯಗಳು ತಡೆಯಾಜ್ಞೆ ನೀಡಿರುತ್ತದೆ. ಭಾರಿ ಪ್ರಮಾಣದ ಮೊತ್ತವು ರಾಜಸ್ವ ಇಲಾಖೆಗೆ ಭೂ ಕಂದಾಯ ಬಾಕಿಯಂತೆ ಪರಿಗಣಿಸಿ ವಸೂಲಿ ಮಾಡುವಂತೆ ಪ್ರಕರಣಗಳನ್ನು ವರ್ಗಾಯಿಸಲಾಗಿದೆ, ಹಾಗೂ ಬಾಕಿಯು ಬಹಳ ಹಿಂದಿನ ವರ್ಷಗಳದ್ದಾಗಿದ್ದು ಗುತ್ತಿಗೆದಾರರ ಸುಳಿವು ಸಿಗದಂತಾಗಿದೆ.

4) ಇತ್ತೀಚೆಗೆ ಸಾಕಷ್ಟು ಪ್ರಕರಣಗಳು ನ್ಯಾಯಾಲಯಗಳಲ್ಲಿ ಇತ್ಯರ್ಥಗೊಂಡಿವೆ. ಇಲಾಖಾವತಿಯಿಂದ ಹಣ ವಸೂಲಿಗಾಗಿ ಅಥವಾ ಭೂ ಕಂದಾಯ ಬಾಕಿಯೆಂದು ಪರಿಗಣಿಸಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ಸಿವಿಲ್ ನ್ಯಾಯಾಲಯಗಳು ಪರಮನೆಂಟ್ ಅಥವಾ ತಾತ್ಕಾಲಿಕ ಇನ್‌ಜಂಕ್ಷನ್ ನೀಡದಂತೆ ಹಾಗೂ ಮೊಕದ್ದಮೆಯು ನ್ಯಾಯಾಲಯದಲ್ಲಿ ಇದ್ದಾಗ್ಯೂ ವಿವಾದಿತ ಮೊತ್ತವನ್ನು ಭರಿಸಲು ಕಾನೂನಿನಲ್ಲಿ ಅವಕಾಶ ಮಾಡಲಾಗಿದೆ. ಆದಾಗ್ಯೂ ಸದರಿ ತಿದ್ದುಪಡಿಗೆ ಇತ್ತೀಚಿಗೆ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ.